ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 7-3-2017

## ಪತ್ರಿಕಾ ಆಮಂತ್ರಣ

1. International Women's Day-2017.

Be Bold For Change

Inauguration:
Siddaramaiah,
Chief Minister, Government of Karnataka
Presides:
R.V. Deshpande,
Minister for Large and Medium Industries
Guest of Honour
Sri Priyank M. Kharge,
Minister for IT & BT and Tourism
Santhosh S. Lad,
Minister for Labour

Date: 8-3-2017 Wednesday at 9-30 A.M.
Venue: Kalinga Hall, Hotel Lalit Ashok, Bengaluru

**2. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ:**

**ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಮತ್ತು ಇತರೆ ಪ್ರಶಸ್ತಿಗಳ ಪ್ರದಾನ ಸಮಾರಂಭ:**

**ಉದ್ಘಾಟನೆ ಹಾಗೂ ಪ್ರಶಸ್ತಿ ಪ್ರದಾನ:**

ಸಿದ್ದರಾಮಯ್ಯ,
ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ.

ದಿನಾಂಕ: 08-03-2017. ಬುಧವಾರ, ಸಮಯ : ಬೆಳಿಗ್ಗೆ 11.00 ಗಂಟೆಗೆ

ಸ್ಥಳ: ರವೀಂದ್ರ ಕಲಾಕ್ಷೇತ್ರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002.

3. ಪತ್ರಿಕಾಗೋಷ್ಠಿ:
ಶ್ರೀ ತನ್ವೀರ್ ಸೇಠ್,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು
ದಿನಾಂಕ: 08-03-2017 ಬುಧವಾರ ಸಮಯ ಬೆಳಿಗ್ಗೆ 11-30 ಗಂಟೆಗೆ
ಸ್ಥಳ: ಕೊಠಡಿ ಸಂಖ್ಯೆ 262, ವಿಧಾನ ಸೌಧ, ಬೆಂಗಳೂರು

4. ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಜಾನಪದ ಜಾತ್ರೆ ಚಾಲನೆ:

ಶ್ರೀಮತಿ ಉಮಾಶ್ರೀ, ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ದಿನಾಂಕ: 08-03-2017. ಬುಧವಾರ, ಸಮಯ : ಸಂಜೆ 4.00 ಗಂಟೆಗೆ

ಸ್ಥಳ: ಬಯಲು ರಂಗಮಂದಿರ, ಕಲಾಗ್ರಾಮ ಆವರಣ, ಮಲ್ಲತ್ತಹಳ್ಳಿ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

# ಸರ್ಕಾರದ ಪ್ರಮುಖ ಯೋಜನೆಗಳ ಮಾಹಿತಿ ಒದಗಿಸುವ 'ಪ್ರತಿಬಿಂಬ' ಮಾಹಿತಿ ಕೋಶ – ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಲೋಕಾರ್ಪಣೆ

ಬೆಂಗಳೂರು, ಮಾರ್ಚ್ 6 , (ಕರ್ನಾಟಕ ವಾರ್ತೆ)

ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳ ಮಹತ್ವಾಂಕ್ಷೆಯ ಪ್ರಮುಖ ಯೋಜನೆಗಳ ಭೌತಿಕ ಸಾಧನೆ ಹಾಗೂ ಆರ್ಥಿಕ ಪ್ರಗತಿ ಕುರಿತು ಮಾಹಿತಿ ಒದಗಿಸುವ ಸರ್ಕಾರದ ಮಾಹಿತಿ

ಕೋಶ 'ಪ್ರತಿಬಿಂಬ' ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಲೋಕಾರ್ಪಣೆ ಮಾಡಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು 'ಪ್ರತಿಬಿಂಬ' ಅಂತರ್ಜಾಲಕ್ಕೆ ಚಾಲನೆ ನೀಡಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರದ ಗುರಿ ಮತ್ತು ಸಾಧನೆಗಳನ್ನು ಸಾರ್ವಜನಿಕರೂ ಸೇರಿದಂತೆ ನಾಡಿನ ಜನರಿಗೆ ಮಾಹಿತಿ ಒದಗಿಸುವ ವೇದಿಕೆಯಾಗಲಿದೆ ಈ ಪ್ರತಿಬಿಂಬ ಮಾಹಿತಿ ಕೋಶ ಎಂದರು.

ಚುನಾಯಿತ ಪ್ರತಿನಿಧಿಯಾಗಿ ಜನರಿಗೆ ಉತ್ತರದಾಯಿತ್ವ ಇರಬೇಕು, ಐದು ವರ್ಷಗಳಿಗೊಮ್ಮೆ ಚುನಾವಣೆ ಮೂಲಕ ಅರಿಸಿ ಬರುವ ಸರ್ಕಾರವು ಚುನಾವಣೆ ಸಂದರ್ಭದಲ್ಲಿ ಜನರಿಗೆ ನೀಡಿದ ಭರವಸೆಗಳ ಉತ್ತದಾಯಿತ್ವ ಈ ಅಂತರ್ಜಾಲದಲ್ಲಿ ದಾಖಲಾಗುತ್ತದೆ. ಉದಾಹರಣೆಗೆ ಕೃಷಿಭಾಗ್ಯ ಯೋಜನೆಯಲ್ಲಿ ಒಂದು ಲಕ್ಷ ಕೃಷಿ ಹೊಂಡ ನಿರ್ಮಾಣ ಮಾಡಲಾಗಿದೆ. ವರ್ಷಾಂತ್ಯದಲ್ಲಿ ಇನ್ನು 30 ಸಾವಿರ ಕೃಷಿ ಹೊಂಡಗಳನ್ನು ನಿರ್ಮಿಸಲಾಗುವುದು. ಕೃಷಿ ಹೊಂಡ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ ಎಂದು ಮುಖ್ಯಮಂತ್ರಿ ಅವರು ಹೇಳಿದರು.

ಗುರಿ ಮತ್ತು ಸಾಧನೆಯ ಮಾಹಿತಿ ಲಭ್ಯವಾಗುವ ಪ್ರತಿಬಿಂಬದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ನೀಡಲಾಗಿದ್ದ 165 ಭರವಸೆಗಳಲ್ಲಿ ಈಗಾಗಲೇ 125 ಕ್ಕೂ ಹೆಚ್ಚು ಭರವಸೆಗಳನ್ನು ನಮ್ಮ ಸರ್ಕಾರ ಈಡೇರಿಸಿದೆ. ನುಡಿದಂತೆ ನಡೆಯುವ ಭರವಸೆ ಈಡೇರಿಸುವ ಸರ್ಕಾರ ನಮ್ಮದು. ರಾಜ್ಯ ಹಾಗೂ ದೇಶದ ಜನರ ಮುಂದೆ ನಮ್ಮ ಸಾಧನೆಯ ಮಾಹಿತಿ ಒದಗಿಸಲು 'ಪ್ರತಿಬಿಂಬ' ಮಾಹಿತಿ ಕೋಶ ವೇದಿಕೆಯಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಪ್ರತಿಬಿಂಬ' ಎಂಬ ಮಾಹಿತಿ ಒದಗಿಸುವ ಯೋಜನೆಯಲ್ಲಿ ಆಂಧ್ರ ಪ್ರದೇಶ ರಾಜ್ಯ ಸರ್ಕಾರವು ಮೊದಲ ಸ್ಥಾನದಲ್ಲಿದೆ. ಕರ್ನಾಟಕ ರಾಜ್ಯವು ಎರಡನೇ ಸ್ಥಾನದಲ್ಲಿದೆ ಎಂದ ಮುಖ್ಯಮಂತ್ರಿ ಅವರು ಸರ್ಕಾರದ ಗುರಿ–ಸಾಧನೆಗಳನ್ನು ಜನರ ಬಳಿಗೆ ಕೊಂಡ್ಯೊಯ್ಯುವ ಕೆಲಸವನ್ನು ಈ 'ಪ್ರತಿಬಿಂಬ' ಮಾಡಲಿದ್ದು ಇದರಲ್ಲಿ ಪ್ರಮುಖ ಇಲಾಖೆಗಳ ಪ್ರಮುಖ ಯೋಜನೆಗಳ ಮಾಹಿತಿಗಳನ್ನು ಆಯಾ ತಿಂಗಳಿನ ಸಾಧನೆಗಳ ಬಗ್ಗೆ ಮಾಹಿತಿ ಒದಗಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕಂದಾಯ ಸಚಿವ ಕಾಗೋಡು ತಿಮ್ಮಪ್ಪ, ಕಾನೂನು ಸಚಿವ ಟಿ.ಬಿ. ಜಯಚಂದ್ರ, ಅರಣ್ಯ ಸಚಿವ ರಮಾನಾಥ್ ರೈ, ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನೇಯ, ಮಾಹಿತಿ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ, ಯುವಜನ ಸಬಲೀಕರಣ ಹಾಗೂ ಮೀನುಗಾರಿಗೆ ಸಚಿವ ಪ್ರಮೋದ್ ಮಧ್ವರಾಜ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀಮತಿ ಕೆ. ರತ್ನಪ್ರಭ, ಅಭಿವೃದ್ಧಿ ಆಯುಕ್ತ ವಿಜಯಭಾಸ್ಕರ್, ವಾರ್ತಾ

**ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಂ. ಲಕ್ಷ್ಮೀನಾರಾಯಣ ಸೇರಿದಂತೆ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.**

**ಮುಖ್ಯಮಂತ್ರಿ ಅವರ ಪ್ರಧಾನ ಕಾರ್ಯದರ್ಶಿ ಡಾ. ಎಲ್.ಕೆ. ಅತೀಖ್ ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯಮಂತ್ರಿ ಅವರ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್ ಹಾಜರಿದ್ದರು.**

**ಎಂಅರ್ಎಂ:ಕೆಪಿಪಿ:ಜಿಪಿಆರ್.**

## ಕೆ.ಜಿ.ಎಫ್ ನಲ್ಲಿ ನೂತನ ನಗರ ನಿರ್ಮಾಣಕ್ಕೆ ಸಿದ್ದತೆ– ಆರ್.ರೋಷನ್ ಬೇಗ್

ಬೆಂಗಳೂರು, ಮಾರ್ಚ್ 7 (ಕರ್ನಾಟಕ ವಾರ್ತೆ):

ಬೆಂಗಳೂರಿನ ಜನಸಂಖ್ಯೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಕೆ.ಜಿ.ಎಫ್ ನಲ್ಲಿ ಅಂದಾಜು 11 ಸಾವಿರ ಎಕರೆ ಜಾಗದಲ್ಲಿ ಖಾಸಗಿ ಮತ್ತು ಸಾರ್ವಜನಿಕ ಸಹಭಾಗಿತ್ವದಲ್ಲಿ ನೂತನ ನಗರವನ್ನು ನಿರ್ಮಾಣ ಮಾಡಲು ಸಿದ್ದತೆ ಮಾಡಿಕೊಳ್ಳಲಾಗುತ್ತಿದೆ ಎಂದು ನಗರಾಭಿವೃದ್ಧಿ ಮತ್ತು ಹಜ್ ಸಚಿವರಾದ ಆರ್.ರೋಷನ್ ಬೇಗ್ ಅವರು ತಿಳಿಸಿದರು.

ಇಂದು ವಿಕಾಸಸೌಧದ ಸಮ್ಮೇಳನ ಸಭಾಂಗಣದಲ್ಲಿ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಕೆ.ಜಿ.ಎಫ್ ನಲ್ಲಿ ಈಗಾಗಲೇ ಎರಡು ಗಾಲ್ಫ್‌ಕ್ಲಬ್, ಎರಡು ಹೆಲಿಪ್ಯಾಡ್ ಮತ್ತು ಬ್ರಿಟೀಷ್ ಕಾಲದ 140 ಭವ್ಯ ಬಂಗಲೆಗಳಿದ್ದು, ಬೆಂಗಳೂರಿನಿಂದ ಬಂಗಾರಪೇಟೆಗೆ ರೈಲು ಸೇವೆ ಇರುವುದರಿಂದ ನೂತನ ನಗರವನ್ನು ನಿರ್ಮಿಸಲು ಬೇಕಾಗುವ ಎಲ್ಲಾ ಸವಲತ್ತುಗಳನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಮೂಲ ಸೌಲಭ್ಯಗಳಿರುವಂತೆ ಸಿದ್ಧಪಡಿಸಲು ಉದ್ದೇಶಿಸಲಾಗಿರುವ ಈ ನೂತನ ನಗರಕ್ಕೆ ಬೆಂಗಳೂರಿನ 20 ಲಕ್ಷದಷ್ಟು ಜನರನ್ನು ಸ್ಥಳಾಂತರಿಸಬಹುದಾಗಿರುವುದರಿಂದ ಹೆಚ್ಚುತ್ತಿರುವ ಬೆಂಗಳೂರಿನ ಜನಸಂಖ್ಯೆಯನ್ನು ಕಡಿಮೆ ಮಾಡಲು ಸಾಧ್ಯವಾಗಲಿದೆ ಎಂದರು.

ಕರಾವಳಿ ತೀರದ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ತಮಿಳುನಾಡಿನ ಘಟಕವೊಂದರಲ್ಲಿ ಸಮುದ್ರದ ಉಪ್ಪುನೀರನ್ನು ಶುದ್ಧೀಕರಿಸಿ ಕುಡಿಯುವ ನೀರನ್ನಾಗಿ ಪರಿವರ್ತಿಸುತ್ತಿರುವ ಮಾದರಿಯಲ್ಲಿಯೇ ಉಡುಪಿ, ಮಂಗಳೂರು, ಸಾಲಿಗ್ರಾಮ ಮತ್ತು ಕುಂದಾಪುರದಲ್ಲಿ ಸಮುದ್ರದ ನೀರನ್ನು ಶುದ್ಧೀಕರಿಸುವ ಘಟಕವನ್ನು ಸ್ಥಾಪಿಸುವ ಮೂಲಕ ಸಮುದ್ರದ ನೀರನ್ನು ಸಿಹಿ ನೀರಾಗಿ ಪರಿವರ್ತಿಸಿ ಶಾಶ್ವತ ಕುಡಿಯುವ ನೀರು ಸರಬರಾಜು ಮಾಡುವ ಸಲುವಾಗಿ 3500.04 ಕೋಟಿ ರೂ ವೆಚ್ಚದಲ್ಲಿ ಯೋಜನೆಯನ್ನು ರೂಪಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಸಮುದ್ರದ ನೀರಿನ ಮೂಲದಿಂದ ಕುಡಿಯುವ ನೀರನ್ನು ಒದಗಿಸಲು ಒಂದು ಸಾವಿರ ಲೀಟರ್ ಗೆ 55 ರೂಪಾಯಿ ಖರ್ಚಾದರೆ, ಕನ್ವೆನ್ಷನಲ್ ಶುದ್ಧೀಕರಿಸುವ ಘಟಕದಿಂದ ಒದಗಿಸಲಾಗುವ ಒಂದು ಸಾವಿರ ಲೀಟರ್ ಕುಡಿಯುವ ನೀರು ಒದಗಿಸಲು 5 ರೂಪಾಯಿ 50 ಪೈಸೆ ವೆಚ್ಚವಾಗಲಿದೆ. ಅಲ್ಲದೆ ರಾಜ್ಯದ 55 ನಗರಗಳಿಗೆ 24 ಗಂಟೆ ನಿರಂತರವಾಗಿ ಕುಡಿಯುವ ನೀರು ಸರಬರಾಜು ಮಾಡಲು ಕೂಡ

ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದ್ದು, ಮುಂದಿನ 3 ವರ್ಷಗಳಲ್ಲಿ ಈ ಯೋಜನೆಯು ಪೂರ್ಣಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

**ಮೈಸೂರು ನಗರದಲ್ಲಿ ಸೈಕಲ್ ಸೇವೆ:**

**ಭಾರತ ದೇಶದಲ್ಲಿ ಮೊದಲ ಭಾರಿಗೆ ಸಾರ್ವಜನಿಕರಿಗೆ ಬಾಡಿಗೆ ಆಧಾರದಲ್ಲಿ ಸೈಕಲ್ ಸೇವೆಯನ್ನು ಒದಗಿಸಲು 20.52 ಕೋಟಿ ರೂ. ವೆಚ್ಚದಲ್ಲಿ ವರ್ಲ್ಡ್ ಬ್ಯಾಂಕ್ ಅನುದಾನ ಮತ್ತು ಡೈರೆಕ್ಟರೆಟ್ ಆಫ್ ಅರ್ಬನ್ ಲ್ಯಾಂಡ್ ಟ್ರ್ಯಾನ್ಸ್‌ಪೋರ್ಟ್ ಅವರ ಸಹಭಾಗಿತ್ವದಲ್ಲಿ ಯೋಜನೆಯನ್ನು ರೂಪಿಸಲಾಗಿದೆ ಎಂದು ಸಚಿವರು ತಿಳಿಸಿದರು. ಸಾರ್ವಜನಿಕ ಬಸ್ ಮತ್ತು ರೈಲ್ವೆ ನಿಲ್ದಾಣಗಳಿಗೆ ಹತ್ತಿರ ಇರುವಂತೆ ಒಟ್ಟು 48 ಸ್ಥಳಗಳಲ್ಲಿ ಸೈಕಲ್ ನಿಲ್ದಾಣಗಳನ್ನು ಮಾಡುವ ಮೂಲಕ 450 ಸೈಕಲ್ ಗಳನ್ನು ಬಳಸಿಕೊಂಡು ಸಾರ್ವಜನಿಕರಿಗೆ ಸೈಕಲ್ ಸೇವೆಯನ್ನು ನೀಡಲು ಉದ್ದೇಶಿಸಲಾಗಿದ್ದು, ಪ್ರಮುಖವಾಗಿ ವಿದೇಶಿ ಪ್ರವಾಸಿಗರನ್ನು ಆಕರ್ಷಿಸುವುದು ಮತ್ತು ಪರಿಸರ ನೈರ್ಮಲ್ಯ ತಡೆಗಟ್ಟುವ ಸಲುವಾಗಿ ಸಾರ್ವಜನಿಕರನ್ನು ಸೈಕಲ್ ಬಳಸುವಂತೆ ಪ್ರೇರೇಪಿಸುವುದೂ ಕೂಡ ಈ ಯೋಜನೆಯ ಉದ್ದೇಶವಾಗಿದು, ಅಧಿವೇಶನ ಮುಗಿದ ನಂತರ ಮುಖ್ಯಮಂತ್ರಿಗಳು ಈ ಯೋಜನೆಯ ಕಾಮಗಾರಿಗೆ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು.**

**ಬಿಜಿಎಂ/ಜೆಡಿ**

## ಪಶ್ಚಿಮ ಘಟ್ಟ ಸೂಕ್ಷ್ಮ ಪ್ರದೇಶ ವಿಚಾರ ಸಧ್ಯದಲ್ಲೇ ಕೇಂದ್ರ ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಕೆ– ಬಿ. ರಮಾನಾಥ ರೈ

**ಬೆಂಗಳೂರು, ಮಾರ್ಚ್ 7, (ಕರ್ನಾಟಕ ವಾರ್ತೆ)**

ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ಪ್ರದೇಶ ವಿಚಾರಕ್ಕೆ ಸಂಬಂಧಿಸಿದಂತೆ ಸಧ್ಯದಲ್ಲೇ ಕೇಂದ್ರ ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಲಾಗುವುದು ಎಂದು ಅರಣ್ಯ ಹಾಗೂ ಜೀವಿಶಾಸ್ತ್ರ ಸಚಿವ ಬಿ. ರಮಾನಾಥ ರೈ ಅವರು ತಿಳಿಸಿದರು.

ವಿಧಾನ ಸೌಧ ತಮ್ಮ ಕಛೇರಿಯಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವರು ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ಪ್ರದೇಶ ವಿಚಾರ ಆರು ರಾಜ್ಯಗಳಿಗೆ ಸಂಬಂಧಿಸಿದ್ದಾಗಿದ್ದು ಆ ಪೈಕಿ ಕೇರಳ ಹಾಗೂ ಕರ್ನಾಟಕ ರಾಜ್ಯಗಳು ಮಾತ್ರ ಹೆಚ್ಚು ಆಸಕ್ತಿ ವಹಿಸಿ ಈಗಾಗಲೇ ಕೇಂದ್ರ

ಸರ್ಕಾರಕ್ಕೆ ಎರಡು ಬಾರಿ ಆಕ್ಷೇಪಣೆ ಸಲ್ಲಿಸಿವೆ ಆದರೂ ಕೇಂದ್ರ ಸರ್ಕಾರ ಮತ್ತೊಮ್ಮೆ ಕರಡು ಅಧಿಸೂಚನೆ ಹೊರಡಿಸಿದ್ದು ನಾವು ಮತ್ತೊಮ್ಮೆ ಆಕ್ಷೇಪಣೆ ಸಲ್ಲಿಸುತ್ತೇವೆ ಎಂದರು.

ಪಶ್ಚಿಮ ಘಟ್ಟ ಹಾಗೂ ರಾಜ್ಯದ ಹಿತಾಸಕ್ತಿಯನ್ನು ಯಾವುದೇ ಕಾರಣಕ್ಕೂ ರಾಜ್ಯ ಸರ್ಕಾರ ಬಿಟ್ಟುಕೊಡುವುದಿಲ್ಲ ಎಂದು ಹೇಳಿದ ಅರಣ್ಯ ಸಚಿವರು ರಾಜ್ಯ ಸರ್ಕಾರ ಅಡಳಿತಾತ್ಮಕವಾಗಿ ಹಾಗೂ ರಾಜಕೀಯವಾಗಿ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದಾಗಿ ತಿಳಿಸಿದರು.

ಕೇಂದ್ರ ಸರ್ಕಾರದ ಅಧಿಸೂಚನೆಯಂತೆ ಭೌತಿಕ ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸಲು ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷರಾದ ಆರ್.ಎಂ.ಎನ್. ಸಹಾಯ್ ಅವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ತಜ್ಞರ ಸಮಿತಿಯನ್ನು ರಚಿಸಿ ಸಮಿತಿ ಸೂಚಿಸಿರುವ ಸೂಕ್ಷ್ಮಪ್ರದೇಶಗಳ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ ಎಂದ ಸಚಿವರು ಜನರ ಅಭಿಪ್ರಾಯಗಳನ್ನು ಎರಡು ತಿಂಗಳುಗಳ ಕಾಲ ಪ್ರತಿ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಸಮಿತಿ ವರದಿ ಮಾಡಿದೆ ಎಂದರು.

ಈ ಭಾರಿ ಬಂಡಿಪುರ ಹಾಗೂ ಕಪ್ಪತ್ತಗುಡ್ಡ ಅರಣ್ಯ ಪ್ರದೇಶಗಳಲ್ಲಿ ಸುಮಾರು 100 ಎಕರೆಯಷ್ಟು ಪ್ರದೇಶದಲ್ಲಿ ಬೆಂಕಿ ದುರಂತ ಕಂಡುಬಂದಿದೆ ಎಂದು ಅರಣ್ಯ ಸಚಿವ ಬಿ. ರಮಾನಾಥ ರೈ ಅವರು ತಿಳಿಸಿದರು.

## ಆರೋಗ್ಯ ಸಹಾಯವಾಣಿ 104 ಆರೋಗ್ಯ ಕೇಂದ್ರದ ವಿವರ ಲಭ್ಯ

ಬೆಂಗಳೂರು, ಮಾರ್ಚ್ 7, (ಕರ್ನಾಟಕ ವಾರ್ತೆ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂದಿನಿಂದ ಮತ್ತೇ ದಡಾರ ಮತ್ತು ರುಬೆಲ್ಲಾ ಲಸಿಕಾ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿದೆ. ಮೊದಲ 2 ವಾರ ಪ್ರತಿಯೊಂದು ಶಾಲೆ/ಅಂಗನವಾಡಿಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಿಬ್ಬಂದಿಗಳು ಭೇಟಿ ನೀಡಿ ಮಕ್ಕಳಿಗೆ ಚುಚ್ಚುಮದ್ದನ್ನು ನೀಡಿರುತ್ತಾರೆ. ಆದರೆ, ಕೆಲವು ಶಾಲೆಗಳಲ್ಲಿ ಲಸಿಕೆ ಸಿಗದೇ ಇರುವುದರಿಂದ ನಾಗರೀಕರು ಪಕ್ಕದ ಆರೋಗ್ಯ ಕೇಂದ್ರಗಳ ವಿವರವನ್ನು ತಿಳಿದುಕೊಳ್ಳಲು ಕರೆ ಮಾಡುತ್ತಿದ್ದು ಇದಕ್ಕಾಗಿ ಇಲಾಖೆಯ "ಆರೋಗ್ಯ ಸಹಾಯವಾಣಿ 104" ಕ್ಕೆ ಕರೆ ಮಾಡುತ್ತಿದ್ದಾರೆ.

ಸ್ಮಾರ್ಟ್‌ಫೋನ್ ಹೊಂದಿರುವವರು **http://kgis.ksrsac.in/kgis (explore KGIS- Downloads - Mobile Apps's)** ಲಿಂಕನ್ನು ಡೌನ್‌ಲೋಡೆ ಮಾಡಿಕೊಂಡು ಹತ್ತಿರವಿರುವ ಪ್ರಾಥಮಿಕ ಆರೋಗ್ಯ ಕೇಂದ್ರ/ ಸಮುದಾಯ ಆರೋಗ್ಯ ಕೇಂದ್ರ/ತಾಲ್ಲೂಕು

**ಆಸ್ಪತ್ರೆ/ಜಿಲ್ಲಾ ಆಸ್ಪತ್ರೆಗಳನ್ನು ತಿಳಿದುಕೊಳ್ಳಬಹುದಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**
**ಕೆಎಂ**